**ದಿ:27.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಪಿ ಬಿ ವಕೀಲರಿಂದ:**

ಕಯ್ಯಂಡಿರ ಅಪ್ಪಯ್ಯನವರಿಂದ ಮುತ್ತಪ್ಪ ಆಸ್ತಿ ಖರೀದಿ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಮುತ್ತಪ್ಪ ಸರ್ವೆ ನಂ.37/3 ರಲ್ಲಿ 50 ಸೆಂಟ್ ಸ್ವಾಧೀನದಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಈ ದಾವೆಯನ್ನು ದಾಖಲಿಸುವ ಮೊದಲು ನಾನು ಪ್ರತಿವಾದಿಗಳಿಗೆ ನೋಟಿಸ್ ಕೊಟ್ಟಿದ್ದೆ. ಸದರಿ ನೋಟಿಸಿಗೆ ಪ್ರತಿವಾದಿಗಳು ನಿಪಿ 5 ರಂತೆ ಮರು ಉತ್ತರ ಕೊಟ್ಟಿದ್ದರು. ನಿಪಿ 5 ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸದರಿ ನೋಟಿಸಿನಲ್ಲಿ ಸರ್ವೆ ನಂ.37/3 ರಲ್ಲಿ ಅರ್ಧ ಎಕರೆ ಸ್ವಾಧೀನ ಇರುವ ಬಗ್ಗೆ ನಮೂದಿಸಿದ್ದಾರೆ ಎಂದರೆ ಸರಿ. ನಾನು ಕೇಸನ್ನು ಸರ್ವೆ ನಂ.37/2 ಕ್ಕೆ ದಾಖಲಿಸಿದ್ದೇನೆ ಸರ್ವೆ ನಂ.37/3 ನನಗೆ ಸಂಬಂಧಿಸಿಲ್ಲ. ಸರ್ವೆ ನಂ.37/8 1.77 ಎಕರೆ ಮುತ್ತಪ್ಪನವರ ಸ್ವಾಧೀನದಲ್ಲಿ ಇದೆ. ಸದರಿ ಆಸ್ತಿಯ ಸ್ವಾಧೀನದ ಬಗ್ಗೆ ನಾನು ಯಾವುದೆ ದಾವೆ ಸಲ್ಲಿಸಿಲ್ಲ. ಸರ್ವೆ ಮಾಡಿಸಿದಾಗ ಪ್ರತಿವಾದಿಯರ ದಾವಾ ಆಸ್ತಿಯನ್ನು ಒತ್ತುವರಿ ಮಾಡಿರುವ ಬಗ್ಗೆ ಗೊತ್ತಾಯಿತು. ಸರ್ವೆ ಮಾಡಿಸಿದ ದಾಖಲೆ ನನ್ನ ಬಳಿ ಇದೆ. ಆ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪ್ರತಿವಾದಿಯರು ದಾವಾ ಆಸ್ತಿಯನ್ನು ಒತ್ತುವರಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಸಿಗಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ನೋಟಿಸ್ ತಲುಪುವವರೆಗೂ ಈ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಈ 3 ದಾವೆಗಳಲ್ಲಿ ಪ್ರತಿವಾದಿಯರ ಜಾಗಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಸದರಿ 3 ಕೇಸಿನ ದಾವಾ ಆಸ್ತಿಗಳು ನನ್ನ ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳು ಸುಳ್ಳು ಚೆಕ್ಕು ಬಂದಿಗಳನ್ನು ನಮೂದಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-
(ರೂಪ ಕೆ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.